ದಿನಾಂಕ : 3/11/2018 → ರಾಯಬಾಗ ಹಾಗೂ ಕುಡಚಿ

# ದೋಷ ರಹಿತ ಮತದಾರರ ಯಾದಿ ತಯಾರಿಸಲು ಕ್ರಮ



ವಿಜಯವಾಣಿ ಚಿತ್ರ

ರಾಯಬಾಗದಲ್ಲಿ ಆರ್‌ಸಿ ಮೇಘಣ್ಣವರ ಸುದ್ದಿಗಾರರೊಂದಿಗೆ ಮಾತನಾಡಿದರು.

» ಪ್ರಾದೇಶಿಕ ಆಯುಕ್ತ ಪಿ.ಎ.ಮೇಘಣ್ಣವರ ಹೇಳಿಕೆ

» ರಾಯಬಾಗಕ್ಕೆ ಭೇಟಿ

**ರಾಯಬಾಗ:** ಮುಂಬರುವ ಲೋಕಸಭೆ ಚುನಾವಣೆಗೆ ಪ್ರತಿ ಮತಕ್ಷೇತ್ರದಲ್ಲಿ ದೋಷ ಇಲ್ಲದ ಮತದಾರರ ಯಾದಿ ತಯಾರಿಸುವ ಗುರಿಯನ್ನು ಚುನಾವಣೆ ಆಯೋಗ ಹಮ್ಮಿಕೊಂಡಿರುವುದರಿಂದ ಜಿಲ್ಲೆಯ ಎಲ್ಲ ವಿಧಾನಸಭೆ ಕ್ಷೇತ್ರಗಳಿಗೆ ಭೇಟಿ ನೀಡಿ ಪರಿಶೀಲನೆ ನಡೆಸಲಾಗುತ್ತಿದೆ ಎಂದು ಪ್ರಾದೇಶಿಕ ಆಯುಕ್ತ ಪಿ.ಎ. ಮೇಘಣ್ಣವರ ತಿಳಿಸಿದ್ದಾರೆ.

ಪಟ್ಟಣದ ತಹಸೀಲ್ದಾರ್ ಕಚೇರಿಯಲ್ಲಿ ಶನಿವಾರ ಸಂಜೆ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಲೋಪದೋಷ ಇಲ್ಲದ ಮತದಾರರ ಪಟ್ಟಿ ಸಿದ್ಧಪಡಿಸಲು ನಾಗರಿಕರು ಮತ್ತು ರಾಜಕೀಯ ಪಕ್ಷದ ನಾಯಕರು ತಾಲೂಕು ಆಡಳಿತಕ್ಕೆ ಸಹಕಾರ ನೀಡಬೇಕು. ನಿಧನ ಹೊಂದಿದವರು, ಒಬ್ಬರ ಹೆಸರು ಗ್ರಾಮೀಣ ಮತ್ತು ನಗರ ಎರಡು ಕಡೆಗಳಲ್ಲಿ ಇರುವುದು ಕಂಡು ಬಂದಿದೆ. ಅವುಗಳನ್ನು ತೆಗೆದು ಹಾಕಿ ಸರಿಪಡಿಸಲು ಬಿಎಲ್‌ಒಗಳಿಗೆ ಸೂಚಿಸಲಾಗಿದೆ ಎಂದರು. ಕೆಲವು ಬಿಎಲ್‌ಒಗಳು ಮನೆ ಮನೆಗೆ ತೆರಳಿ ಪರಿಶೀಲನೆ ನಡೆಸಿ ಮಾಹಿತಿ ನೀಡಿಲ್ಲ. ಅಂತವರ ವಿರುದ್ಧ ಶಿಸ್ತುಕ್ರಮ ಕೈಗೊಳ್ಳುವಂತೆ ಉಪವಿಭಾಗಾಧಿಕಾರಿಗೆ ಸೂಚಿಸಿದ್ದೇನೆ. ಬಿಎಲ್‌ಒಗಳಿಗೆ ಮತ್ತು ಡಾಟಾ ಎಂಟ್ರಿ ಆಪರೇಟರ್‌ಗಳಿಗೆ ಗುಣಮಟ್ಟದ ತರಬೇತಿ ನೀಡುವಂತೆ ತಿಳಿಸಿರುವುದಾಗಿ ಹೇಳಿದರು.

ರಾಯಬಾಗ ಮತಕ್ಷೇತ್ರದ ನಾಗರಮುನ್ನೋಳಿ, ಕಬ್ಬೂರ, ಹುಬ್ಬರವಾಡಿಗಳಿಗೆ ಭೇಟಿ ನೀಡಿ ಪರಿಶೀಲನೆ ನಡೆಸಿದ ಆಯುಕ್ತರು, ನಂತರ ಕುಡಚಿ ಮತಕ್ಷೇತ್ರದಲ್ಲಿ ಪರಿಶೀಲನೆ ನಡೆಸಲು ತೆರಳಿದರು. ಉಪವಿಭಾಗಾಧಿಕಾರಿ ಪ್ರವೀಣ ಬಾಗೇವಾಡಿ, ತಹಸೀಲ್ದಾರ್ ಡಿ.ಎಸ್. ಜಮಾದಾರ, ಗ್ರೇಡ್-2 ತಹಸೀಲ್ದಾರ್ ಬಸಪ್ಪ ಪೂಜಾರ, ತಹಸೀಲ್ದಾರ್ ಕಚೇರಿ ಸಿಬ್ಬಂದಿ ಪ್ರಶಾಂತ ಪಾಟೀಲ, ವಿನಾಯಕ ಭಾಟೆ ಮತ್ತಿತರರು ಇದ್ದರು.

Scanned by CamScanner

# ದೋಷರಹಿತ ಮತದಾರರ ಪಟ್ಟಿಗೆ ಸಿದ್ಧತೆ



ಮತದಾರರ ದೋಷರಹಿತ ಪಟ್ಟಿ ತಯಾರಿಕೆ ಬಗ್ಗೆ ಶನಿವಾರ ಪ್ರಾದೇಶಿಕ ಆಯುಕ್ತ ಪಿ.ಎ. ಮೇಘಣ್ಣವರ ರಾಯಬಾಗ ಹಾಗೂ ಕುಡಚಿ ವಿಧಾನಸಭೆ ಕ್ಷೇತ್ರದಲ್ಲಿ ಮತಗಟ್ಟೆಗಳಿಗೆ ಭೇಟಿ ನೀಡಿದರು

ಪ್ರಜಾವಾಣಿ ವಾರ್ತೆ

ರಾಯಬಾಗ: ಭಾರತ ಚುನಾವಣಾ ಆಯೋಗದ ಆದೇಶದಂತೆ ಅರ್ಹತಾ ದಿನಾಂಕ ಆಧರಿಸಿ ಭಾವಚಿತ್ರ ಮತದಾರರ ಯಾದಿಗಳ ವಿಶೇಷ ಸಂಕ್ಷಿಪ್ತ ಪರಿಷ್ಕರಣೆ ಹಾಗೂ ದೋಷರಹಿತ ಮತದಾರರ ಪಟ್ಟಿಯನ್ನು ತಯಾರಿಸುವ ಬಗ್ಗೆ ಜಿಲ್ಲೆಯ ಎಲ್ಲ ತಾಲ್ಲೂಕುಗಳ ಮತಗಟ್ಟೆಗಳಿಗೆ ಭೇಟಿ ನೀಡಿ ಪರಿಶೀಲಿಸಿ, ಕ್ರಮ ಕೈಕೊಳ್ಳುವುದಾಗಿ ಮತದಾರರ ಪಟ್ಟಿಗಳ ವೀಕ್ಷಕ ಪ್ರಾದೇಶಿಕ ಆಯುಕ್ತ ಪಿ.ಎ. ಮೇಘಣ್ಣವರ ತಿಳಿಸಿದರು.

ಶನಿವಾರ ರಾಯಬಾಗ ಹಾಗೂ ಕುಡಚಿ ಮತಕ್ಷೇತ್ರದ ಕಬ್ಬೂರ, ಹುಬ್ಬರ ವಾಡಿ, ಬೆಕ್ಕೇರಿ, ಕುಡಚಿಗಳಲ್ಲಿನ ಮತಗಟ್ಟೆಗಳಿಗೆ ಭೇಟಿ ನೀಡಿ ಮಾತನಾಡಿದ ಅವರು, ಪರಿಣಾಮಕಾರಿ ಹಾಗೂ ಸಮರ್ಪಕವಾಗಿ ಪಟ್ಟಿ ಸಿದ್ಧಪಡಿಸಲು ಕ್ರಮ ಕೈಕೊಳ್ಳಲಾಗುವುದು ಎಂದರು.

ಅನರ್ಹರು, ಬೇರೆ ಕಡೆ ಹೋದವರನ್ನು ಮೃತರ ಹೆಸರುಗಳನ್ನು ತೆಗೆದುಹಾಕಿ ಪಟ್ಟಿ ತಯಾರಿಸುವುದು. ಈ ನಿಟ್ಟಿನಲ್ಲಿ ಜಿಲ್ಲೆಯ ಎಲ್ಲ ತಾಲ್ಲೂಕಿನ ಮತಗಟ್ಟೆಗಳಿಗೆ ಭೇಟಿ ನೀಡಿ ಪರಿಶೀಲನೆ ಮಾಡುತ್ತಿದ್ದು ಮನೆಮನೆಗೆ ಭೇಟಿ ನೀಡುತ್ತಿದ್ದೇನೆ. ಶಿಕ್ಷಣ ಇಲಾಖೆಯವರು ಏನೇನು ಮಾಡಿದ್ದಾರೆಂಬುದನ್ನು ಪರಿಶೀಲಿಸಲಾಗುವುದು. ಯಾವುದೇ ಕಾರಣಕ್ಕೂ ಎರಡೆರಡು ಕಡೆ ಮತದಾರರ ಹೆಸರು ಬರದಂತೆ ಎಚ್ಚರ ವಹಿಸಲಾಗುತ್ತಿದೆ. ದೋಷ ರಹಿತ ಪಟ್ಟಿಯನ್ನು 2019ರ ಜನವರಿ 4ರಂದು ಅಂತಿಮವಾಗಿ ಪ್ರಕಟಿಸ ಲಾಗುವುದು ಎಂದರು. ಚಿಕ್ಕೋಡಿ ಉಪವಿಭಾಗಾಧಿಕಾರಿ ಪ್ರವೀನ ಬಾಗೆವಾಡಿ, ಡಿ.ಎಸ್. ಜಮಾದಾರ, ಸಿಬ್ಬಂದಿ ಇದ್ದರು.

Scanned by CamScanner

# ಮತದಾರರ ಪಟ್ಟಿ ಸಿದ್ಧಪಡಿಸಲು ಸಹಕಾರ ನೀಡಿ: ಮೇಘಣ್ಣವರ

• **ಕನ್ನಡಪ್ರಭ ವಾರ್ತೆ** ರಾಯಬಾಗ

ಮುಂಬರುವ ಲೋಕಸಭೆ ಚುನಾವಣೆಗೆ ಪ್ರತಿ ಮತಕ್ಷೇತ್ರದಲ್ಲಿ ದೋಷಇಲ್ಲದಮತದಾರರ ಯಾದಿ ತಯಾರಿಸುವ ಗುರಿಯನ್ನು ಚುನಾವಣಾ ಆಯೋಗ ಹಮ್ಮಿಕೊಂಡಿರುವ ಹಿನ್ನೆಲೆಯಲ್ಲಿ ಜಿಲ್ಲೆಯ ಎಲ್ಲ ವಿಧಾನಸಭೆ ಕ್ಷೇತ್ರಗಳಲ್ಲಿ ಭೇಟಿ ನೀಡಿ ಪರಿಶೀಲನೆ ನಡೆಸಲಾಗುತ್ತಿದೆ ಎಂದು ಪ್ರಾದೇಶಿಕ ಆಯುಕ್ತ ಪಿ.ಎ. ಮೇಘಣ್ಣವರ ತಿಳಿಸಿದರು.

ಪಟ್ಟಣದ ತಹಸೀಲ್ದಾರ್ ಕಚೇರಿಯಲ್ಲಿ ಶನಿವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಲೋಪ ದೋಷ ಇಲ್ಲದ ಮತದಾರರ ಪಟ್ಟಿ ಸಿದ್ಧಪಡಿಸಲು ನಾಗರೀಕರು ಮತ್ತು ರಾಜಕೀಯ ಪಕ್ಷದವರು ತಾಲೂಕು ಆಡಳಿತಕ್ಕೆ ಸಹಕಾರ ನೀಡಬೇಕು ಎಂದರು.

ನಿಧನ ಹೊಂದಿದವರು, ಒಬ್ಬರ ಹೆಸರು ಗ್ರಾಮೀಣ ಮತ್ತು ನಗರ ಎರಡು ಕಡೆಗಳಲ್ಲಿ ಇರುವುದು ಕಂಡು ಬಂದಿದೆ. ಅವುಗಳನ್ನು ತೆಗೆದು ಹಾಕಿ ಸರಿಪಡಿಸಲು ಬಿಎಲ್‌ಒ ಗಳಿಗೆ ಸೂಚಿಸಲಾಗಿದೆ.

ಕೆಲವೊಂದು ಬಿಎಲ್‌ಒ ಗಳು ಮನೆಮನೆಗಳಿಗೆ ತೆರಳಿ ಪರಿಶೀಲನೆ ನಡೆಸಿ ಮಾಹಿತಿ ನೀಡಿಲ್ಲ. ಅಂತಹವರ ವಿರುದ್ಧ ಶಿಸ್ತುಕ್ರಮ ಕೈಗೊಳ್ಳುವಂತೆ ಉಪವಿಭಾಗಾಧಿಕಾರಿಗಳಿಗೆ ಸೂಚಿಸಿದ್ದೇನೆ. ಬಿಎಲ್‌ಒಗಳಿಗೆ ಮತ್ತು ಡಾಟಾ ಎಂಟ್ರಿ ಆಪರೇಟಗಳಿಗೆ ಗುಣಮಟ್ಟದ ತರಬೇತಿ ನೀಡುವಂತೆ ತಿಳಿಸಿರುವುದಾಗಿ ಹೇಳಿದರು. ರಾಯಬಾಗ ಮತಕ್ಷೇತ್ರದ ನಾಗರಮುನ್ನೋಳ್ಳಿ, ಕಬ್ಬೂರ, ಹುಬ್ಬರವಾಡಿ ಗಳಿಗೆ ಭೇಟಿ ನೀಡಿ ಪರೀಶಿಲನೆ ನಡೆಸಿದ ಆಯುಕ್ತರು, ಸಂಜೆ ಕುಡಚಿ ಮತಕ್ಷೇತ್ರದಲ್ಲಿ ಪರಿಶೀಲನೆ ನಡೆಸಲು ತೆರಳಿದರು. ಉಪವಿಭಾಗಾಧಿಕಾರಿ ಪ್ರವೀಣ ಬಾಗೇವಾಡಿ, ತಹಸೀಲ್ದಾರ್ ಡಿ.ಎಸ್.ಜಮಾದಾರ, ಗ್ರೇಡ್ 2 ತಹಸೀಲ್ದಾರ್ ಬಸಪ್ಪ ಪೂಜಾರ, ತಹಸೀಲ್ದಾರ್ ಸಿಬ್ಬಂದಿ ಪ್ರಶಾಂತ ಪಾಟೀಲ, ವಿನಾಯಕ ಭಾಟೆ ಸೇರಿದಂತೆ ಇತರರು ಇದ್ದರು.



ರಾಯಬಾಗ ಪಟ್ಟಣದ ತಹಸೀಲ್ದಾರ್ ಕಚೇರಿಗೆ ಭೇಟಿ ನೀಡಿ ಸುದ್ದಿಗಾರರೊಂದಿಗೆ ಪ್ರಾದೇಶಿಕ ಆಯುಕ್ತ ಪಿ.ಎ.ಮೇಘಣ್ಣವರ ಮಾತನಾಡಿದರು.

Scanned by CamScanner